ಪ್ರಧಾನ ಸಿವಿಲ್ ಮತ್ತು ಜೆಎಮ್ಎಫ್ ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.

ಸಿ.ಸಿ ನಂಃ **564/ 2019**

ಫಿರ್ಯಾದಿದಾರಃ ಕರ್ನಾಟಕ ಸರ್ಕಾರ ಪರವಾಗಿ ಗುರುಮಠಕಲ್
ಪೋಲಿಸ್ ಠಾಣೆ.

// ವಿರುದ್ಧ //

ಆರೋಪಿಃ ರಮೇಶ ತಂದೆ ಬುಗ್ಗಪ್ಪ ಇದ್ದಿಲು,
ವಃ **38** ವರ್ಷ, ಸಾಃ ಜಲಾಲಪೂರ, ಮಂಡಲ್ ನಾರಾಯಣಪೇಠ,
ತಾಃ ಮಕ್ತಲ್, ಜಿಃ ಮಹಿಬೂಬನಗರ(ಟಿ.ಎಸ್).

ದಂಡ ಪ್ರಕ್ರೀಯಾ ಸಂಹಿತೆ ಕಲಂಃ **313** ರಡಿಯಲ್ಲಿ ಆರೋಪಿಯ ಹೇಳಿಕೆ.

ಪ್ರಃ 01- ಅಭಿಯೋಜನೆಯ ಪರವಾಗಿ ನುಡಿದ ಸಾಕ್ಷವನ್ನು ನೀನು ಕೇಳಿರುವೆಯಾ?

ಉತ್ತರಃ

ಪ್ರಃ 02-ಚಾಸಾ-01/ಪ್ರಾಸಾ-1 ಶ್ರೀ ಬಸವರಾಜ ಜಿ.ಕೆ, ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿನಾಂಕ 25.11.2018 ರಂದು ಬೆಃ 6.00 ಗಂಟೆಗೆ ನಾನು ಮನೆಯಲ್ಲಿ ಇದ್ದಾಗ ನಮ್ಮ ಠಾಣಾ ವ್ಯಾಪ್ತಿಯ ಪರಮೇಶಪಲ್ಲಿ ಗೇಟ್ನಲ್ಲಿ ಒಬ್ಬ ವ್ಯಕ್ತಿ ಸಿ.ಹೆಚ್ ಪುಡಿಯಿಂದ ತಯಾರಿಸಿದ ಹೆಂಡವನ್ನು ಸಾರ್ವಜನಿಕರಿಗೆ ಮರಾಟ ಮಾಡುತಿದ್ದಾನೆ ಎಂದು ಬಾತ್ಮಿ ಬಂದಿರುತ್ತದೆ. ನಾನು ಚಾಸಾಃ 5 ರವರಿಗೆ ಇಬ್ಬರು ಪಂಚರನ್ನು ಕರೆದುಕೊಂಡು ಬರುವಂತೆ ಹಾಗೂ ಚಾಸಾಃ 4, 6 ಮತ್ತು 7 ರವರಿಗೆ ಠಾಣೆಗೆ ಬರುವಂತೆ ತಿಳಿಸಿದ್ದೆನು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಃ 03-ಚಾಸಾ-01/ಪ್ರಾಸಾ-1 ರವರು ಮುಂದುವರೆದು, ನಾನು ಠಾಣೆಗೆಹೋದಾಗ ಚಾಸಾಃ 5 ರವರು ಚಾಸಾಃ 2 ಮತ್ತು 3 ರವರನ್ನು ಕರೆದುಕೊಂಡು ಬಂದಿದ್ದು, ಅವರಿಗೆ ಬಂದ ಮಾಹಿತಿ ತಿಳಿಸಿ ಪಂಚರನ್ನಾಗಿ ಬರಮಾಡಿಕೊಂಡಿದ್ದೆನು. ನಾನು ನನ್ನ ಸಿಬ್ಬಂದಿ ಹಾಗೂ ಪಂಚರೊಂದಿಗೆ ಮಾಹಿತಿ ಬಂದ ಸ್ಥಳವಾದ ಪರಮೇಶಪಲ್ಲಿ ಗೇಟ್ ಹತ್ತಿರ ಹೋದಾಗ ಅಲ್ಲಿ ಒಬ್ಬ ವ್ಯಕ್ತಿ ಸಾರ್ವಜನಿಕರಿಗೆ ಮದ್ಯ ಮಾರಾಟ ಮಾಡುತ್ತಿರುವುದು ಕಂಡುಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಃ 04-ಚಾಸಾ-01/ಪ್ರಾಸಾ-1 ರವರು ಮುಂದುವರೆದು, ನಾವುಗಳು ದಾಳಿ ಮಾಡಿದಾಗ ಸದರಿ ಸಾರ್ವಜನಿಕರು ಓಡಿ ಹೋಗಿದ್ದು, ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ಹಿಡಿದು ಹೆಸರು, ವಿಳಾಸ ಕೇಳಲಾಗಿ ಆತ ರಮೇಶ ತಂದೆ ಬುಗ್ಗಪ್ಪ, ಸಾಃ ಜಲಾಲಪೂರ ಎಂದು ತಿಳಿಸಿದ್ದನು. ಆತನ ಹತ್ತಿರ ಇದ್ದ ನಾಲ್ಕು ಪ್ಲಾಸಿಕ್ ಚಿಲಗಳನ್ನು ಪರಿಶೀಲನೆ ಮಾಡದಲಾಗಿ ಅದರಲ್ಲಿ ಬಿಳಿ ಬಣ್ಣದ ದ್ರಾವಣ ಇರುವ ಪ್ಯಾಕೆಟು ಕಂಡುಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಃ 05-ಚಾಸಾ-01/ಪ್ರಾಸಾ-1 ರವರು ಮುಂದುವರೆದು, ಪ್ರತಿ ಚೀಲದಲ್ಲಿ ತಲಾ 50 ರಂತೆ ಒಟ್ಟು 200 ಹೆಂಡದ ಪ್ಯಾಕೇಟುಗಳು ಇರುವುದು ಕಂಡುಬಂದಿರುತ್ತದೆ. ಪ್ರತಿಯೊಂದು ಅರ್ದ ಲೀ ಹೆಂಡ ಇರುವುದು ಅಳತೆ ಮಾಡಿ ನೋಡಿದಾಗ ಕಂಡುಬಂದಿರುತ್ತದೆ. ಎರಡು ಪ್ಯಾಕೆಟುಗಳಿಂದ ಒಂದು ಲೀ. ಹೆಂಡವನ್ನು ಮಾದರಿಯಾಗಿ ತೆಗೆದುಕೊಂಡು ಪ್ಲಾಸ್ಟಿಕ್ ಬಾಟಲಿಯಲ್ಲಿ ಹಾಕಿ ಅದಕ್ಕೆ ಪಂಚರ ಸಹಿ ಪಡೆದ ಚೀಟಿ ಅಂಟಿಸಿದ್ದೆನು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಃ 06-ಚಾಸಾ-01/ಪ್ರಾಸಾ-1 ರವರು ಮುಂದುವರೆದು, ಆರೋಪಿಯ ಹತ್ತಿರ ರೂ.70/- ನಗದು ಹಣ ದೊರೆತಿದ್ದು, ಆ ಬಗ್ಗೆ ವಿಚಾರಿಸಲಾಗಿ ಆತ ಹೆಂಡ ಮಾರಾಟದಿಂದ ಬಂದ ಹಣ ಆಗಿರುತ್ತದೆ ಎಂದು ತಿಳಿಸಿದ್ದರಿಂದ ಅದನ್ನು ಪಂಚರ ಸಮಕ್ಷಮ ಜಪ್ತಿ ಮಾಡಿಕೊಂಡಿದ್ದೆನು. ಸ್ಥಳದಲ್ಲಿ ಬೆಃ 07.00 ರಿಂದ 08.00 ಗಂಟೆ ವರೆಗೆ ಪಂಚನಾಮೆ ಮಾಡಿ ಆರೋಪಿ ಹಾಗೂ ಮು.ಮಾಲನ್ನು ವಶಕ್ಕೆ ಪಡೆದುಕೊಂಡು ಬೆಃ 08.30 ಗಂಟೆಗೆ ಠಾಣೆಗೆ ಹಾಜರಾಗಿ ಚಾಸಾಃ 10 ರವರಿಗೆ ವರದಿ ನೀಡಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಃ 07-ಚಾಸಾ-04/ಪ್ರಾಸಾ-4 ಶ್ರೀ ಶಿವರಾಮರೆಡ್ಡಿ ತಂದೆ ಬಸವರಾಜಪ್ಪ, ಪೋಲಿಸ್ ಪೇದೆ ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ ದಿಃ 25.11.2018 ರಂದು ನಾನು ವಿಶ್ರಾಂತಿಯಲ್ಲಿದ್ದಾಗ ಬೆಃ 06.00 ಗಂಟೆಗೆ ಚಾಸಾಃ 1 ರವರು ನನಗೆ ಕರೆ ಮಾಡಿ ಠಾಣೆಗೆ

ಬರುವಂತೆ ತಿಳಿಸಿದ್ದರು. ನಾನು 6.10 ಗಂಟೆಗೆ ಠಾಣೆಗೆ ಹೋದಾಗ ಅಲ್ಲಿ ಚಾಸಾಃ 2, 3 ಹಾಗೂ 5 ರಿಂದ 7 ರವರು ಸಹ ಹಾಜರು ಇದ್ದರು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಃ 08-ಚಾಸಾ-04/ಪ್ರಾಸಾ-4 ರವರು ಮುಂದುವರೆದು, ನಂತರ ಚಾಸಾಃ 1 ರವರು ನನಗೆ ಹಾಗೂ ಚಾಸಾಃ 2, 3 ಮತ್ತು 5 ರಿಂದ 7 ರವರಿಗೆ ಪರಮೇಶಪಲ್ಲಿ ಗೇಟಿನಲ್ಲಿ ಸಿ.ಹೆಚ್ ಪುಡಿಯಿಂದ ತಯಾರಿಸಿದ ಸೇಂದಿ ಮಾರಾಟ ನಡೆದಿರುವ ಬಗ್ಗೆ ತಮಗೆ ಮಾಹಿತಿ ಬಂದಿರುವುದಾಗಿ ತಿಳಿಸಿದ್ದರು. ನಾವು ಬೆಃ 6.50 ಗಂಟೆಗೆ ಪರಮೇಶಪಲ್ಲಿ ಗೇಟ್ ಹತ್ತಿರ ಸ್ವಲ್ಪ ದೂರದಲ್ಲಿ ಮರೆಯಾಗಿ ನಿಂತು ನೋಡಿದಾಗ ಒಬ್ಬ ವ್ಯಕ್ತಿ 04 ಮಸಾಲೆ ಚೀಲಗಳಿಂದ ಪ್ಯಾಕೆಟನ್ನು ತೆಗೆದು ಜನರಿಗೆ ಮಾರಾಟ ಮಾಡುವುತ್ತಿರುವುದು ಕಂಡುಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಃ 09-ಚಾಸಾ-04/ಪ್ರಾಸಾ-4 ರವರು ಮುಂದುವರೆದು, ನಾವು ಬೆಃ 7.00 ಗಂಟೆಗೆ ದಾಳಿ ಮಾಡಿದಾಗ ಸೇಂದಿ ಕುಡಿಯಲು ಮತ್ತು ಖರೀದಿಸಲು ಬಂದಿದ್ದ ಸಾರ್ವಜನಿಕರು ಸ್ಥಳದಿಂದ ಓಡಿ ಹೋಗಿದ್ದು, ಮಾರಾಟ ಮಾಡುತ್ತಿದ್ದ ವ್ಯಕ್ತಿಯನ್ನು ನಾವು ಹಿಡಿದು ವಿಚಾರಿಸಲಾಗಿ ಆತ ತನ್ನ ಹೆಸರು ರಮೇಶ ತಂದೆ ಬುಗ್ಗಪ್ಪ, ಸಾಃ ಜಲಾಲಪುರ ಎಂದು ತಿಳಿಸಿದ್ದನು. ಆತನ ಹತ್ತಿರ ಇದ್ದ ಮಸಾಲೆ ಚೀಲಗಳನು ಪರಿಶೀಲಿಸಿ ನೋಡಲಾಗಿ ಅವುಗಳಲ್ಲಿ ತಲಾ 50 ರಂತೆ ಒಟ್ಟು 200 ಪ್ಯಾಕೇಟುಗಳಲ್ಲಿ ಸೇಂದಿ ಇರುವುದು ಕಂಡುಬಂದಿರುತ್ತದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಃ 10-ಚಾಸಾ-04/ಪ್ರಾಸಾ-4 ರವರು ಮುಂದುವರೆದು, ನಂತರ ಆ ಪೈಕಿ ಒಂದು ಲೀ. ರನ್ನು ಮಾದರಿಯಾಗಿ ತೆಗೆದುಕೊಂಡಿದ್ದೆವು. ಸ್ಥಳದಲ್ಲಿ ಬೆಃ 7.00 ರಿಂದ 8.00 ವರೆಗೆ ಪಂಚನಾಮೆ ಮಾಡಿರುತ್ತೇವೆ. ಆರೋಪಿಯ ಹತ್ತಿರ ಇದ್ದ ರೂ.70/- ನಗದು ಹಣವನ್ನು ಸಹ ಜಪ್ತಿ

ಮಾಡಿಕೊಂಡಿದ್ದೆವು. ನಂತರ ಕಚೇರಿಗೆ ಬಂದು ಚಾಸಾಃ 1 ರವರು ಆರೋಪಿಯ ವಿರುದ್ಧ ಸರಕಾರದ ಪರವಾಗಿ ದೂರು ಸಲ್ಲಿಸಿರುತ್ತಾರೆ. ಆ ನಂತರ ನಾನು ತನಿಖಾಧಿಕಾರಿಗೆ ಹೇಳಿಕೆ ನೀಡಿದ್ದೆನು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರಃ 11-ನಿಮ್ಮ ಪರ ಸಾಕ್ಷಿ ವಿಚಾರಣೆ ಮಾಡಿಸುವಿರಾ?

ಉತ್ತರಃ

ಪ್ರಃ 12- ನಿಮಗೆ ಈ ಪ್ರಕರಣದಲ್ಲಿ ಏನನ್ನಾದರೂ ಹೇಳುವುದು ಇದೆಯಾ?

ಉತ್ತರಃ

ಪ್ರಃ 13- ನಿಮಗೆ ಈ ಪ್ರಕರಣದಲ್ಲಿ, ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ
ಯಾವುದಾದರೂ ದಾಖಲೆಗಳನ್ನು ಸಲ್ಲಿಸುವುದು ಇದೆಯಾ?

ಉತ್ತರಃ

(ಮೇಲ್ಕಾಣಿಸಿದ ಸಾಕ್ಷಿದಾರರ ಹೇಳಿಕೆಗಳನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಿ ಇಂದು ತೆರೆದ ನ್ಯಾಯಾಲಯದಲ್ಲಿ ಆರೋಪಿತನಿಗೆ ಓದಿ ಹೇಳಲಾಯಿತು.)

ದಿನಾಂಕಃ 12.05.2026.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ..ದಂ.ಗಳು, ಯಾದಗಿರಿ.